ಓ ಎಸ್ ನಂಃ 301/2017

ಪಿ. ಡಬ್ಲ್ಯೂ ಃ 1

**ದಿಃ 4.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ 6 ನೇ ಪ್ರತಿವಾದಿ ಪರ ಶ್ರೀ ಎಸ್ ಜಿ ಆರ್ ವಕೀಲರಿಂದ ಃ**

ಚಿಕ್ಕಚೌಡಯ್ಯ ಬಿನ್ ನಂಜಪ್ಪ ಎಂದರೆ ನನ್ನ ಚಿಕ್ಕಪ್ಪ ಇರುತ್ತಾರೆ. ನಿ ಪಿ 41 ಇದನ್ನು ನಾನು ಹಾಜರುಪಡಿಸಿದ್ದೇನೆ. ಆಸ್ತಿ ಮೊದಲು ಒಟ್ಟಿಗಿತ್ತು, ಈಗ ಭಾಗವಾಗಿರಬಹುದು ಎಂದು ತೋರಿಸಲು ಅದನ್ನು ಕೊಟ್ಟಿದ್ದೇನೆ. ಯಾವಾಗ ಭಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ನಿ ಪಿ 41 ಮತ್ತು ನಿ ಪಿ 42 ರಲ್ಲಿ ತೋರಿಸಿರುವ ಸ್ವತ್ತುಗಳನ್ನು ನನಗೆ ಯಾವುದೆ ಭಾಗ ಬರಬೇಕಾಗಿಲ್ಲ. ನಿ ಪಿ 40 ರಲ್ಲಿ ತೋರಿಸಿರುವ ಸ್ವತ್ತುಗಳಲ್ಲಿ ಸ.ನಂ. 23/10 ರಲ್ಲಿ ನಮಗೆ ಭಾಗ ಬರಬೇಕು. ಸಾಕ್ಷಿ ಮುಂದುವರೆದ ಸ.ನಂ. 23/10 ರಲ್ಲಿ ಭಾಗ ಬರಬೇಕು, ಆದರೆ ಚಿಕ್ಕಚೌಡಯ್ಯ ಬಿನ್ ನಂಜಪ್ಪ ಇವರ ಸ್ವತ್ತಿನಲ್ಲಿ ಭಾಗ ಬರಬೇಕಾಗಿಲ್ಲ ಎಂದು ಹೇಳುತ್ತಾರೆ. ಆ ಸ್ವತ್ತು ಚಿಕ್ಕಚೌಡಯ್ಯ ಬಿನ್ ನಂಜಪ್ಪ ಇವರ ಹೆಸರಿನಲ್ಲಿದ್ದಾರೆ ಅದರಲ್ಲಿ ನಮಗೆ ಭಾಗ ಬರಬೇಕಾಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಮ್ಮ ತಾತನ ಹೆಸರು ನಂಜಪ್ಪ ಅವರಿಗೆ 3 ಜನ ಮಕ್ಕಳು ಅವರೆಂದರೆ ನಮ್ಮತಂದೆ ದೊಡ್ಡಚೌಡಯ್ಯ ಅಲಿಯಾಸ್ ಚೌಡಯ್ಯ, ಚಿಕ್ಕಚೌಡಯ್ಯ ಮತ್ತು ನಾಗಪ್ಪ ಎಂಬ ಗಂಡು ಮಕ್ಕಳು, ಹೆಜ್ಜೋಡಮ್ಮ, ರಂಗಮ್ಮ ಮತ್ತು ಚಿನ್ನಚೌಡಮ್ಮ ಎಂಬ ಹೆಣ್ಣು ಮಕ್ಕಳು ಇರುತ್ತಾರೆ.

ನಮ್ಮ ತಾತನ ಮಕ್ಕಳ ಮದ್ಯೆ ಕುಟುಂಬದ ಎಲ್ಲ ಸ್ವತ್ತುಗಳಲ್ಲಿ ಭಾಗ ಆಗಿತ್ತು, ಆ ಭಾಗ ನಾನು ಹುಟ್ಟುವ ಮೊದಲೇ ಆಗಿತ್ತು ಎಂದು ಸಾಕ್ಷಿ ಹೇಳುತ್ತಾರೆ. ಆ ಭಾಗದಲ್ಲಿನಮ್ಮ ತಂದೆಗೆ ಯಾವ ಸ್ವತ್ತುಗಳು ಬಂದವು ಎಂದು ನೆನಪಿಲ್ಲ. ದಾವಾ ಸ್ವತ್ತುಗಳು ಆ ಭಾಗದಲ್ಲಿ ಬಂದವು ಎಂದರೆ ಸರಿ. ಅವುಗಳೆಂದರೆ ಸ.ನಂ. 23/8, ಸ.ನಂ. 23/10, ಸ.ನಂ. 99/1, ಸ.ನಂ. 113/15 ಮತ್ತು ಸ.ನಂ. 32/2 ಈ ಸ್ವತ್ತುಗಳು ನಮ್ಮ ತಂದೆ ಹಾಗೂ ಅವರ ಅಣ್ಣ ತಮ್ಮಂದಿರ ಮದ್ಯೆ ಆದ ಭಾಗದಲ್ಲಿ ಇದ್ದವು. ಅವುಗಳು ನಮ್ಮ

ಪಿತ್ರಾರ್ಜಿತ ಸ್ವತ್ತುಗಳು ಮತ್ತು ಅವುಗಳು ಭಾಗವಾಗಿವೆ ಎಂದು ತೋರಿಸಲು ಯಾವುದೆ ದಾಖಲೆ ಕೊಟ್ಟಿಲ್ಲ. ನಾನು ಈ ದಾವೆಯನ್ನು ನಮ್ಮ ತಂದೆಯ ಎರಡನೆ ಹೆಂಡತಿ ಮತ್ತು ಅವರ ಮಕ್ಕಳ

ವಿರುದ್ದ ಹಾಕಿದ್ದೇನೆ ಎಂದರೆ ಸರಿ. ಎಲ್ಲ ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳೆಂದು ದಾವೆಯಲ್ಲಿ ಹೇಳಿದ್ದೇವೆ ಎಂದರೆ ಸರಿ. ಅದರಲ್ಲಿ ಸ್ವಯಾರ್ಜಿತ ಸ್ವತ್ತುಗಳು ಮತ್ತು ಒಟ್ಟು ಕುಟುಂಬದ ಸ್ವತ್ತುಗಳು ಇರುತ್ತವೆ ಎಂದು ಸಾಕ್ಷಿ ಹೇಳುತ್ತಾರೆ.

ನಮ್ಮ ತಂದೆ, ವಾದಿ ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ಇದ್ದಾಗ ಮಾಡಿದ ಸಂಪಾದನೆಯಿಂದ ಕೊಂಡುಕೊಂಡ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತವೆ. ಸಾಕ್ಷಿಗೆ ಸ.ನಂ. 93/2, ಸ.ನಂ. 93/4 , ಸ.ನಂ. 93/8 ಇವುಗಳನ್ನು ದಾವೆಯಲ್ಲಿ ಸೇರಿಸಿದ್ದೀರಾ ಎಂಬ ಪ್ರಶ್ನೆಗೆ ಅವುಗಳನ್ನುಸೇರಿಸಿಲ್ಲ ಮತ್ತು ಅವುಗಳು ಕ್ರಮವಾಗಿ ದೊಡ್ಡಚೌಡಯ್ಯ, ಲಕ್ಷ್ಮಮ್ಮ ಇವರುಗಳ ಹೆಸರಿನಲ್ಲಿ ಇವೆ ಎಂದು ಒಪ್ಪಿಕೊಂಡಿದ್ದರಿಂದ **ಅವುಗಳನ್ನು ಕ್ರಮವಾಗಿ ನಿ ಡಿ 1 ರಿಂದ ನಿ ಡಿ 3 ಎಂದು ಗುರುತಿಸಲಾಯಿತು.** ಅವುಗಳು ನಮ್ಮ ದೊಡ್ಡ ತಾಯಿಗೆ ತವರು ಮನೆಯವರು ಕೊಟ್ಟಿದ್ದರಿಂದ ಅವುಗಳನ್ನು ಸೇರಿಸಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಅವುಗಳು ಸಹ ನಮ್ಮ ತಂದೆ ಸಂಪಾದಿಸಿದ ಸ್ವತ್ತುಗಳೆಂದರೆ ಇರಬಹುದು ಅದರಲ್ಲಿ ನಮ್ಮ ತಂದೆ ದೊಡ್ಡ ಹೆಂಡತಿ ಮತ್ತು ಚಿಕ್ಕ ಹೆಂಡತಿಗೆ ಭಾಗ ಮಾಡಿದಾಗ ಆ ಸ್ವತ್ತುಗಳು ದೊಡ್ಡ ಹೆಂಡತಿ ಮತ್ತು ಅವರ ಮಕ್ಕಳ ಭಾಗಕ್ಕೆ ಬಂದಿದ್ದವು ಎಂದರೆ ಸಾಕ್ಷಿ ಇರಬಹುದು, ನಾನು ಆಗ ಹುಟ್ಟಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ದಿನಾಂಕ ಃ 26.11.2017 ರಲ್ಲಿ ನ್ಯಾಯ ಪಂಚಾಯಿತಿ ಮಾಡಿ ಭಾಗ ಕೇಳಿ ಒಟ್ಟು ಕುಟುಂಬದಲ್ಲಿ ಆಸ್ತಿ ಪಿತ್ರಾರ್ಜಿತ ಸ್ವತ್ತಿನಲ್ಲಿ ಭಾಗ ಕೇಳಿದ್ದೇನು ಮತ್ತು ಇಲ್ಲಿಯವರೆವಿಗೂ ನಾನು ಒಟ್ಟು ಕುಟುಂಬದಲ್ಲಿದ್ದೇನೆ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ನಾವು ಈಗಲೂ ಸಹ ಒಟ್ಟು ಕುಟುಂಬದಲ್ಲಿರುತ್ತೇವೆ ಎಂದು ಸಾಕ್ಷಿ ಹೇಳುತ್ತಾರೆ. ನಾನು ದೊಡ್ಡಬಳ್ಳಾಪುರದಲ್ಲಿ ಅಂಗಡಿ ಇಟ್ಟಿರುವ ಸ್ಥಳ ದತ್ತಾತ್ರೇಯ ಚೌಲ್ಟ್ರಿ ಹತ್ತಿರ ಬರುತ್ತದೆ. ಅದರ ಖಾನೇಷುಮಾರಿ ನಂಬರ್ ಇರುವುದಿಲ್ಲ, ಆದರೆ ಅದರ ವಿದ್ಯುತ್ ಬಿಲ್ ಇರುತ್ತದೆ ಅದನ್ನು ತಂದು ಕೊಡುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ಅದರಲ್ಲಿ

ಅಂಗಡಿ ಮತ್ತು ವಾಸದ ಮನೆ ಇದೆ ಎಂದರೆ ಸರಿ. ಸೈಟ್ 16 ಖಾನೇಷುಮಾರಿ 2702/2702 ಇದು ನನ್ನ ಹೆಸರಿನಲ್ಲಿ ಕ್ರಯವಾಗಿದೆ ಎಂದರೆ ಸರಿಯಲ್ಲ. ಅದರಲ್ಲಿ ಇರುವ ಪಾಪಣ್ಣ ಎಂದರೆ ನನ್ನ ಹೆಸರು ಇರುತ್ತದೆ. ಆ ಸೈಟ್ ನನ್ನ ಹೆಂಡತಿ ಹೆಸರಿನಲ್ಲಿ ಕ್ರಯವಾಗಿದೆ, ಅದನ್ನು ನ್ಯಾಯಾಲಯಕ್ಕೆ ಕೊಡುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ನಾಗರತ್ನಮ್ಮ ನನ್ನ ಹೆಂಡತಿ ಎಂದರೆ ಸರಿ. ಪಾಪಣ್ಣ ಎಂದರೆ ನಾನು. ಅದರಲ್ಲಿ 3 ಅಂತಸ್ತಿನ ಮನೆ ಕಟ್ಟಿ ದಿನಾಂಕ ಃ 01.02.2023 ರಂದು ಗೃಹಪ್ರವೇಶ

ಮಾಡಿದ್ದೇನೆ ಎಂದರೆ ಸರಿ. ಅದರ ಆಹ್ವಾನ ಪತ್ರಿಕೆಯನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿ ಡಿ 4 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**